ಫೋನು ಕಡಿದಳು. ತಕ್ಷಣ ನನ್ನತ್ತ ಮೋರೆಯಿಕ್ಕಿ, 'ಅವರು ಬಂದಿದ್ದಾರೆ... ಅನೋಮಾ ಬಾಯ್‌ಫ್ರೆಂಡ್ ಅಲ್ಲದೆ —ಇಬ್ಬರ ಕಾಮನ್ ಫ್ರೆಂಡೊಬ್ಬಳು ಸಹ ಇದ್ದಾಳಂತೆ... ಅವಳೇ ಇವರಿಬ್ಬರನ್ನು ಬೆಸೆಯಿಸಿದ್ದು... ಏನು ವಿಚಿತ್ರ ಗೊತ್ತಾ? ಆ ಹುಡುಗಿ ಮತ್ತು ಈ ಹುಡುಗ ಪ್ರೀತಿಗೆ ಸಿಲುಕಿದ್ದರಂತೆ... ಮಾತು ಮದುವೆಯ ತನಕ ಹೋಗಿ, ಕಡೆಗೆ ಮನೆಯವರು ಒಪ್ಪಲಿಲ್ಲ ಅಂತ ಮುರಿದು ಬಿತ್ತಂತೆ... ಪ್ರೀತಿಗೆ ಮೋಸ ಮಾಡಬಾರದು ಅಂತ ಅವಳೇ ಇವನಿಗೆ ಇನ್ನೊಂದು ಹೆಣ್ಣು ಸಿಗುವವರೆಗೂ ಮದುವೆ ಬೇಡ ಅಂತ ನಿರ್ಧರಿಸಿ, ತಾನೇ ಅನೋಮಳನ್ನ ಇವನಿಗೆ ಪರಿಚಯಿಸಿದ್ದಂತೆ...' ಎಂದು ಹೇಳತೊಡಗಿದಳು.

ನನಗೆ ದಿಟದ ಕತೆಯೇನೆಂದು ತಂತಾನೇ ವಿಶದಗೊಂಡಿತು. ಕುಣಾಲಿಯ ಎಪಿಸೋಡಷ್ಟೂ ತೆರೆಯ ಮೇಲೆ ಜರುಗಿದ ಸಿನಿಮಾದ ಹಾಗೆ ಮೂಡಿಬಂತು.

ವಿಚಿತ್ರವೆನ್ನಿಸಿತು.

'ಅಭೀ... ನೀನೇನು ಅವರು ಬರೋವರೆಗೂ ಇರುತೀಯಾ? ಇಲ್ಲಾ...' ಆದ್ರಾ್ರ ಅನುಮಾನಿಸುತ್ತ ಕೇಳಿದಳು. ತಕ್ಷಣ ಎಚ್ಚೆತ್ತು ಹೊರಡಲನುವಾಗಿ ಎದ್ದು ನಿಂತೆ. ಮನಸೊಳಗೆ, ಬದುಕು ಅನಾಮತ್ತನೆ ತಂದು ಹೊಂಚುವ ಅಜೀಬಾದ ಚಿತ್ರಗಳೆಲ್ಲ ಮೂಡುತ್ತಿದ್ದವು. ಕುಣಾಲಿ... ಆಗ್ನೇಯ... ಅನೋಮಾ... ಭೂಮಿ... ಆದ್ರಾ್ರ... ಜಿಗ್ಸಾ ಪಝುಲಿನಲ್ಲಿ ಮಾಡುವ ಹಾಗೆ, ಯಾವುದನ್ನೆಲ್ಲಿ ಮತ್ತು ಹೇಗೆ ಹೊಂದಿಸುವುದೆಂದು ಎಣಿಸಿಕೊಂಡು ಕಳೆದುಹೋದೆ.

'ಛೇ... ಛೇ... ನಾನು ನಿನಗೆ ಹೊರಡು ಅಂತನ್ನಲಿಲ್ಲ, ಅಭೀ... ಯು ಮೇ ಸ್ಟೇ ಆನ್...' ಆದ್ರಾ್ರ ಹೇಳುತ್ತಿರುವಾಗಲೇ ಕುಣಾಲಿ, ಆಗ್ನೇಯ ಮತ್ತು ಅನೋಮಾರೊಡನೆ, ನಾನು ಕೆಲಹೊತ್ತಿನ ಹಿಂದೆ ನಡೆದುಬಂದ ಭವಂತಿಯಲ್ಲಿಯೇ ನಮ್ಮತ್ತ ಬರುತ್ತಿರುವುದು ಕಾಣಿಸಿತು. ಆಗ್ನೇಯ ಮತ್ತು ಅನೋಮಾ ಕೈಬೆಸೆದುಕೊಂಡು ನಡೆದಿದ್ದರು. ಕುಣಾಲಿ ಏನೋ ಹೇಳಿದ್ದಕ್ಕೆ ಇಬ್ಬರೂ ನಗತೊಡಗಿದರು.

ನಾನು ಆ ಹೊತ್ತಿನಲ್ಲಿ ನನ್ನೊಳಗೇ ಹೆಪ್ಪಿನಂತೆ. ಕಾಗುಣಿತವೇ ಗೊತ್ತಿರದ ಕುಣಾಲಿಗೂ, ತುಸು ಹೆಚ್ಚೇ ವ್ಯಾಕರಣ ತಿಳಿದ ನನಗೂ ವ್ಯತ್ಯಾಸವೇನೆಂಬ ಪ್ರಶ್ನೆಯಲ್ಲಿ ಜೀಕುತ್ತಿದ್ದೆ.

## ನಾಗರಾಜ ವಸ್ತಾರೆ

ಕವಿ, ಕತೆಗಾರ, ಪ್ರಬಂಧಕಾರ, ಆರ್ಕಿಟೆಕ್ಟ್ ನಾಗರಾಜ ವಸ್ತಾರೆ 'ಹಕೂನ ಮಟಾಟ', 'ನಿರವಯವ' ಎಂಬ ಕಥಾಸಂಕಲನಗಳನ್ನು, 'ಮಡಿಲು' ಎಂಬ ನೀಳ್ಗತೆಯನ್ನು ಪ್ರಕಟಿಸಿದ್ದಾರೆ. 'ಹಳೆಮನೆ ಕತೆ', 'ಬಯಲು ಆಲಯ' ಮತ್ತು 'ಪಟ್ಟಣ ಪುರಾಣ' ಅವರ ಅಂಕಣ ಬರಹಗಳ ಪುಸ್ತಕಗಳಾದರೆ, 'ವಸ್ತಾರೆ ಪದ್ಯಗಳು', 'ವಸ್ತಾರೆ ಇನ್ನೂ 75' ಅವರ ಕವಿತೆಗಳ ಸಂಗ್ರಹಗಳಾಗಿವೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ವಸ್ತಾರೆಯವರ ಎಂಟು ಪುಸ್ತಕಗಳು ಇತ್ತೀಚೆಗೆ ಪ್ರಕಟವಾಗಿವೆ.